ಬಾಲ್ಯದಲ್ಲಿ ಅಜ್ಜಿ, 'ಗುರುವಾರದಂದು ಉಗುರು ಕತ್ತರಿಸಬಾರದು' ಎಂದು ಹೇಳುತ್ತಿದ್ದಾಗ ನಾವು ಅದನ್ನು ಮೂಢನಂಬಿಕೆ ಎಂದು ಲೇವಡಿ ಮಾಡುತ್ತಿದ್ದೆವು.

ಆದರೆ ನಮಗೂ ವಯಸ್ಸಾಗುತ್ತಿದ್ದಂತೆ ಪ್ರತಿಯೊಂದಕ್ಕೂ ಕಾರಣವಿದೆಯೆಂದು ಮನವರಿಕೆಯಾಗುತ್ತಿದೆ...

ಗುರುವಾರದಂದು ಉಗುರು ಕತ್ತರಿಸಿದರೆ ನಂತರ ವಾರದ ಕೊನೆಯ ದಿನಗಳಾದ ಶುಕ್ರವಾರ, ಶನಿವಾರ ಮತ್ತು ರವಿವಾರಗಳಂದು ಸಾಫ್ಟ್ ಡ್ರಿಂಕ್ಸ್, ಬಿಯರ್ ಕ್ಯಾನುಗಳನ್ನು ಮತ್ತು ಲೇಸ್, ಕುರ್ಕುರೆ ಪ್ಯಾಕೆಟ್‌ಗಳನ್ನು ತೆರೆಯಲು ಹರಸಾಹಸ ಪಡಬೇಕಾಗುತ್ತದೆ!

***

ಪುಂಡ: ನಿನಗೆ ಯಾವಾಗ ಹೆಚ್ಚು ಕೋಪ ಬರುತ್ತದೆ?

ಗುಂಡ: ಶೇರಿಂಗ್ ಆಟೋರಿಕ್ಷಾದಲ್ಲಿ ಪ್ರಯಾಣ ಮಾಡುತ್ತಿರುವಾಗ.

ಪುಂಡ: ಅದೇಕೆ ಹಾಗೆ?

ಗುಂಡ: ಇಬ್ಬರು ಚೆಂದದ ಹುಡುಗಿಯರ ನಡುವೆ ಹಿಂದಿನ ಸೀಟಿನಲ್ಲಿ ಕೂತಿರುವಾಗ ಮೂರನೆಯಾಕೆ ಬಂದಳೆಂದು ನನ್ನನ್ನು ಆಟೊ ಡ್ರೈವರ್ ಮುಂದಿನ ಸೀಟಿನಲ್ಲಿ ಕೂರಲು ಕರೆದರೆ ಯಮಗಂಡ ಕೋಪ ಬರದಿರುತ್ತದೆಯೆ ಮಾರಾಯ?

***

ಗೆಳೆಯ: ಒಮ್ಮೆ ಕೊರೊನಾ ಸೋಂಕು ತಗುಲಿ ಹೋಮ್ ಕ್ವಾರಂಟೈನ್ ಆಗಿ ಸೂಕ್ತ ಚಿಕಿತ್ಸೆ ಪಡೆದರೂ ಬಳಿಕ ಅದರಿಂದ ಪೂರ್ಣ ಗುಣಮುಖರಾದೆವೆಂದು ಮನೆಯಲ್ಲಿ ಹೇಗೆ ಖಚಿತ ಪಡಿಸಿಕೊಳ್ಳುವುದು?

ವಿವಾಹಿತ ಗುಂಡ: ದಿನಾ ಬೆಳಿಗ್ಗೆ ಮತ್ತು ಸಾಯಂಕಾಲ ನಿನ್ನ ಹೆಂಡತಿಯ ಜೊತೆ ಜೋರು ಜೋರಾಗಿ ಜಗಳವಾಡು. ಒಂದು ವೇಳೆ ಜಗಳದ ನಂತರವೂ ನಿನ್ನ ಉಸಿರಾಟ ಸರಾಗವಾಗಿ ಸಾಗುತ್ತಿದೆಯೆಂದರೆ ನೀನು ಕೊರೊನಾ ಮುಕ್ತನಾದೆಯೆಂದು ತಿಳಿಯಬಹುದು!

***

ಕೊರೊನಾ ವ್ಯಾಕ್ಸಿನ್ ಎರಡನೇ ಡೋಸ್ ಹಾಕಿಸಿಕೊಂಡ ನಂತರ ಗುಂಡಣ್ಣನವರಿಗೆ ಮನೆಗೆ ಹಿಂತಿರುಗುವ ದಾರಿಯಲ್ಲಿ ಕಣ್ಣು ಮಂಜಾಯಿತು. ಎಲ್ಲಾ ಅಸ್ಪಷ್ಟವಾಗಿ ಕಾಣಲಾರಂಭಿಸಿತು.

ಮನೆಗೆ ತಲುಪಿದವರೇ ಗುಂಡಣ್ಣನವರು ವ್ಯಾಕ್ಸಿನೇಷನ್ ಕೇಂದ್ರಕ್ಕೆ ಫೋನಾಯಿಸಿ ವಿಷಯ ತಿಳಿಸಿದರು.

ಆಗ ತಕ್ಷಣವೇ ಅವರು ವ್ಯಾಕ್ಸಿನೇಷನ್ ಕೇಂದ್ರ ತಲುಪುವಂತೆ ಆದೇಶಿಸಲಾಯಿತು ಮತ್ತು ಅವರಲ್ಲಿ ಬಿಟ್ಟು ಹೋಗಿರುವ ಸ್ವಂತದ ಕನ್ನಡಕವನ್ನು ಹಿಂಪಡೆದು ಪ್ರಮಾದವಶಾತ್ ಅಲ್ಲಿಂದ ಧರಿಸಿಕೊಂಡು ಹೋಗಿದ್ದ ಹಿರಿಯ ನರ್ಸ್ ಶಾಂತಮ್ಮನವರ ಕನ್ನಡಕವನ್ನು ಹಿಂತಿರುಗಿಸುವಂತೆ ಕೋರಲಾಯಿತು!

***

ವಯೋವೃದ್ಧ ಗುಂಡಪ್ಪನವರ ಅನುಭವದ ಹಿನ್ನೆಲೆಯಲ್ಲಿ ಜೀವನದ ವಿಶ್ಲೇಷಣೆ, 'ಬಾಲ್ಯದಲ್ಲಿ ಹೋಮ್ ವರ್ಕ್, ಯೌವ್ವನದಲ್ಲಿ ಹೋಮ್ ಲೋನ್, ವೃದ್ಧಾಪ್ಯದಲ್ಲಿ ಹೋಮ್ ಅಲೋನ್ ಹಾಗೂ ಮನೆಯಲ್ಲೇ ಕೂತು ಅನುಲೋಮ್, ವಿಲೋಮ್!'

***

**WHO** ಸದಸ್ಯನಾಗಿರುವ ಗುಂಡನ ಪ್ರಕಾರ, ಮದುವೆಯ 25ನೇ ವಾರ್ಷಿಕೋತ್ಸವ ಆಚರಿಸಿಕೊಂಡಿರುವ ಪುರುಷರು ಯಾರೂ ಕೋವಿಡ್ ವ್ಯಾಕ್ಸಿನೇಷನ್ ಹಾಕಿಸಿಕೊಳ್ಳುವ ಅವಶ್ಯಕತೆಯಿಲ್ಲ. ಏಕೆಂದರೆ ಅವರಿಗೆ ತಮ್ಮ ಪತ್ನಿಯಿಂದ ಸಿಕ್ಕ ಎಲ್ಲಾ ರೀತಿಯ ಟೀಕೆಗಳಿಂದಾಗಿ ಅವರ ರೋಗ ನಿರೋಧಕ ಶಕ್ತಿ ಈಗಾಗಲೇ ವೃದ್ಧಿಯಾಗಿರುತ್ತದೆ! (ಟೀಕಾ ಪ್ರಹಾರವೇ ಟೀಕಾಕರಣವೆನಿಸಿದೆ!)

ಇಲ್ಲಿ **WHO** ಅಂದರೆ 'ವರ್ಲ್ಡ್ ಹಸ್ಬೆಂಡ್ ಆರ್ಗನೈಸೇಷನ್' ಎನ್ನುವುದು ಗಮನಿಸ ತಕ್ಕ ಅಂಶವಾಗಿದೆ!



ಗಣೇಶ್

ಗುಂಡ: ಮಗನೇ, ಯಾವತ್ತೂ ನೀನು ಹುಡುಗಿಯರ ಸಹವಾಸಕ್ಕೆ ಹೋಗಬೇಡ. ಈ ಹುಡುಗಿಯರು ಮತ್ತು ಬಸ್ ಕಂಡಕ್ಟರ್‌ಗಳು ಒಂದೇ ತರಹ ಇರ್ತಾರೆ.

ಮರಿಗುಂಡ: ಅಂದ್ರೇ...

ಗುಂಡ: ಅಂದ್ರೆ, ಅವರ ಬಳಿ ಇದ್ದದ್ದನ್ನೂ ಅವರು ಇಲ್ಲ ಅಂತಾರೆ.

ಮರಿಗುಂಡ: ಏನನ್ನ ಅಪ್ಪಾ ಅವರು ಇಲ್ಲ ಅಂತಾರೆ?

ಗುಂಡ: ಕಂಡಕ್ಟರ್ ಚಿಲ್ಲರೆಯನ್ನು ಮತ್ತು ಹುಡುಗಿಯರು ಬಾಯ್ ಫ್ರೆಂಡನ್ನು, ಇದ್ದರೂ ಇಲ್ಲಾಂತಾರೆ!

***

45 ರಿಂದ 60 ರ ಹರೆಯದ ಪ್ರಜೆಗಳಿಗೆ ಕೊರೊನಾ ವ್ಯಾಕ್ಸಿನ್ ಹಾಕಿಸುವ ಸಂದರ್ಭದಲ್ಲಿ...

ಪತಿ: ವ್ಯಾಕ್ಸಿನ್ ಹಾಕಿಸಿಕೊಂಡೆಯೇನೆ?

ಪತ್ನಿ: ಹೌದು ಕಣ್ರೀ.

ಪತಿ: ಮತ್ತೆ ಇನ್ನೂ ಫೇಸ್ ಬುಕ್ಕಲ್ಲಿ ಫೋಟೊ ಅಪ್ ಲೋಡ್ ಮಾಡಿಲ್ಲ?

ಪತ್ನಿ: ಫೋಟೊ ಕ್ಲಿಕ್ಕಿಸಿ ಆಗಿದೆ. ಆದರೆ 25 ವರ್ಷದವರು ವ್ಯಾಕ್ಸಿನೇಷನ್ ಹಾಕಿಸುವ ಸರದಿ ಬಂದಾಗ ಅದನ್ನು ಅಪ್ ಲೋಡ್ ಮಾಡುತ್ತೇನೆ ಕಣ್ರೀ. ಇಲ್ಲದಿದ್ದಲ್ಲಿ ಸುಳ್ಳು ಹೇಳಿ ಚುಚ್ಚುಮದ್ದು ಹಾಕಿಸಿದ್ದೇನೆಂದು ಸಂಬಂಧಪಟ್ಟ ಇಲಾಖೆಯವರು ನನ್ನೇಲೆ ಆಪಾದನೆ ಹೊರಿಸಬಹುದು!

***

ಗುಂಡನನ್ನು ಸದಾ ಕಾಡುವ ಎರಡು ಸಂಶಯಗಳು...

ಒಂದು, ಗಡಿಯಾರವನ್ನು ಕಂಡು ಹಿಡಿದಾತ ಮೊದಲ ಬಾರಿ ಸಮಯವನ್ನು ಹೇಗೆ ಹೊಂದಿಸಿದ?

ಇನ್ನೊಂದು, ಮೊದಲ ಬಾರಿ ಮೊಸರು ಮಾಡಿದವ ಹೆಪ್ಪು ಎಲ್ಲಿಂದ ತಂದ..?

(ಸಂಗ್ರಹ) ರಮಣ್ ಶೆಟ್ಟಿ ರೆಂಜಾಳ್ ಮುಂಬೈ

ವೆಂಕ: ಸೀನ ಏನು ಮಾಡುತ್ತಿದ್ದೀಯಾ?

ಸೀನ: ಈ ಪುಟ್ಟ ಮಗುವಿನ ಧ್ವನಿಯನ್ನು ರೆಕಾರ್ಡ್ ಮಾಡುತ್ತಿದ್ದೇನೆ.

ವೆಂಕ: ಯಾಕೆ?

ಸೀನ: ಅವನು ದೊಡ್ಡವನಾದ ಮೇಲೆ ಏನು ಇದರ ಅರ್ಥ ಅಂತಾ ಕೇಳಲು.

***

ಸೀನ: ನಾನು ಆರ್ಡರ್ ಮಾಡಿದ ಸೂಪನ್ನು ತರುವಾಗ ಅದರಲ್ಲಿ ನೀನು ಬೆರಳದ್ದಿರುವುದನ್ನ ನೋಡಿದೆ.

ಮಾಣಿ: ಚಿಂತೆ ಮಾಡ್ಬೇಡಿ ಸಾರ್, ನನಗೇನೂ ಆಗ್ಲಿಲ್ಲ! ಸೂಪ್ ತಣ್ಣಗಿತ್ತು!

***

ಸುಬ್ಬಿ ಗಾಬರಿಯಿಂದ ಡಾಕ್ಟರ್‌ಗೆ ಫೋನಾಯಿಸಿದಳು. ಡಾಕ್ಟ್ರೇ ನನ್ನ ಗಂಡ ತಪ್ಪಾಗಿ ತಲೆ ನೋವಿನ ಮಾತ್ರೆಯನ್ನು ನುಂಗಿಬಿಟ್ಟಿದ್ದಾರೆ. ಈಗ ಏನು ಮಾಡಲಿ?

ಡಾಕ್ಟರ್: ಅವರಿಗೆ ತಲೆನೋವು ಬರಿಸಿಬಿಡಿ! ನುಂಗಿದ ಮಾತ್ರೆ ವೇಸ್ಟ್ ಆಗೋದು ಬೇಡ!

***

ಪ್ರೇಮಿಗಳು ಮದುವೆ ಆಗಲು ನಿರ್ಧರಿಸಿದ್ದರು.

ಆತ: ನಿನಗೆ ನನ್ನ ಸಂಬಳ ಸಾಲುತ್ತೆ ಎಂದು ಅನ್ನಿಸುತ್ತಿದೆಯಾ?

ಈಕೆ: ನನಗೇನೋ ಅಷ್ಟು ಸಾಕು! ನಿನಗೆ?

***

ಗರ್ಲ್ ಫ್ರೆಂಡ್: ಬರ್ಥ್ ಡೇ ಗಿಫ್ಟ್ ಎಲ್ಲಿ?

ಬಾಯ್ ಫ್ರೆಂಡ್: ಆ ರಸ್ತೆ ಬದಿಗೆ ನಿಂತಿರುವ ಕೆಂಪು ಕಾರ್ ಕಾಣಿಸುತ್ತಿದೆಯೇ?

ಗರ್ಲ್ ಫ್ರೆಂಡ್: ವಾಹ್! ಎಂದಳು.

ಬಾಯ್ ಫ್ರೆಂಡ್: ಅದೇ ಬಣ್ಣದ ನೇಲ್ ಪಾಲಿಷ್ ತಂದಿದ್ದೇನೆ!

(ಸಂಗ್ರಹ) ವಿದ್ಯಾ ವಿ. ಹಾಲಭಾವಿ